ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ
"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102
ದೂರವಾಣಿ: (08472) - 256767,239556,255564, ಫ್ಯಾಕ್ಸ್:(08472) 227527
Email:hkadbgulb@gmail.com, hkrdbklb@gmail.com Website: hkrdb.kar.nic.in

ಹೈ.ಕ.ಪ್ರ.ಅ.ಮಂಡಳಿ/ತಾಂತ್ರಿಕ/e-procurment/2019-20/13978 ದಿನಾಂಕ: 01.08.2019.

:- ಸುತ್ತೋಲೆ :-

ವಿಷಯ:- ಮಂಡಳಿಯಿಂದ ಅನುಷ್ಠಾನಗೊಳಿಸುವ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಆನ್‌ಲೈನ್ ಮೂಲಕ ಕೈಗೊಳ್ಳುವ ಕುರಿತು.

ಉಲ್ಲೇಖ:-1) ಹೈ.ಕ.ಪ್ರ.ಅ.ಮಂಡಳಿ/ತಾಂತ್ರಿಕ/e-procurment/2017-18/7548 ದಿ:16.02.2019
2) ಹೈ.ಕ.ಪ್ರ.ಅ.ಮಂಡಳಿ/ಸಿಬ್ಬಂದಿ/10/2018-19/598 ದಿನಾಂಕ: 09.05.2019

~~0~~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇ. ಸಂಗ್ರಹಣಾ ಕೋಶದವರು ಅನುಷ್ಠಾನಕ್ಕೆ ತಂದಿರುವ ಇಪ್ರೊಕ್ಯೂರಮೆಂಟ್‌ನ್ನು ಹೈ.ಕ.ಪ್ರ.ಅ. ಮಂಡಳಿಯಲ್ಲಿಯೂ ಸಹ ಜಾರಿಗೆ ತರಲು ಕ್ರಮ ಜರುಗಿಸುವಂತೆ ಈಗಾಗಲೇ ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರು ಮಾಹೇವಾರು ಜರುಗುವ ಹೈ.ಕ.ಪ್ರಗತಿಯ ಕುರಿತು ವಿಡಿಯೋ ಕಾನ್ಫರೆನ್ಸ್ ನಲ್ಲಿ ನಿರ್ದೇಶನಗಳನ್ನು ನೀಡಿದ್ದಾರೆ. ಈ ಹಿನ್ನಲೆಯಲ್ಲಿ ಈಗಾಗಲೇ ಮಂಡಳಿಯಿಂದ ಎಲ್ಲಾ ಅನುಷ್ಠಾನ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಇವರಿಗೆ ಇ-ಆಡಳಿತದ ತಾಂತ್ರಿಕ ಅಧಿಕಾರಿಗಳ ಸಮ್ಮುಖದಲ್ಲಿ Hand to Hand ತರಬೇತಿ ನೀಡಲಾಗಿರುತ್ತದೆ. ಅಲ್ಲದೇ, ಆಡಳಿತಾತ್ಮಕ ಅನುಮೋದನೆ ಪ್ರಕ್ರೀಯೆಯನ್ನು 2019-20ನೇ ಸಾಲಿನಿಂದ ಇ-ಸಂಗ್ರಹಣ ಮುಖಾಂತರ ಜಾರಿಗೆ ತರುವುದಕ್ಕೆ ಪೂರಕ ವ್ಯವಸ್ಥೆ ರೂಪಿಸಿಕೊಳ್ಳಲು ಸಹ ತರಬೇತಿ ಕಾರ್ಯಾಗಾರದಲ್ಲಿ ಒತ್ತು ನೀಡಲಾಗಿರುತ್ತದೆ.

ಈ ನಿಟ್ಟಿನಲ್ಲಿ ಎಲ್ಲಾ ಅನುಷ್ಠಾನಾಧಿಕಾರಿಗಳು 2019-20ನೇ ಸಾಲಿನ ಆಡಳಿತಾತ್ಮಕ ಅನುಮೂದನೆಯ ಪ್ರಕ್ರಿಯೆಯಿಂದ ಸಂಪೂರ್ಣ ಕಾಮಗಾರಿಯ ಅನುಷ್ಠಾನದ ಹಂತವಾರು ಪ್ರಗತಿಯ ವಿವರಗಳ ನಮೋದಿಸಿರುವ ಪ್ರಕ್ರಿಯೆಯನ್ನು ಇ-ಸಂಗ್ರಹಣ ತಂತ್ರಜ್ಞಾನ (e-procurment) ನಲ್ಲಿ ಕಡ್ಡಾಯವಾಗಿ ನಿರ್ವಹಿಸುವುದು. ಆಡಳಿತಾತ್ಮಕ ಅನುಮೋದನೆಯನ್ನು ಮ್ಯಾನ್ಯೂಲ್ ಪ್ರಕ್ರಿಯೆ ಮುಖಾಂತರ ಕೈಗೊಂಡಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲವೆಂದು ಎಚ್ಚರಿಕೆ ನೀಡಲಾಗಿದೆ.

ಮೇಲೆ ವಿವರಿಸಿದಂತೆ, 2019-20ನೇ ಸಾಲಿನ ಕ್ರಿಯಾ ಯೋಜನೆ ಕಾಮಗಾರಿಗಳ ಅನುಮೋದನೆ ಹಂತದಿಂದ ಸಂಪೂರ್ಣ ಪ್ರಕ್ರಿಯೆಯನ್ನು ಇ-ಪ್ರೊಕ್ಯೂರಮೆಂಟನಲ್ಲಿ ಜಾರಿಗೆ ತರಲು ನಿರ್ದೇಶಿಸಿದೆ.

ಕಾರ್ಯದರ್ಶಿಗಳು 1.8.19
ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ.

ಗೆ,
**ಹೈ.ಕ.ಪ್ರ.ಅ.ಮಂಡಳಿಯ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ.**

**ಪ್ರತಿಯನ್ನು,**
1] ಹೈ.ಕ.ಪ್ರ.ಅ.ಮಂಡಳಿಯ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರವರ ಮಾಹಿತಿಗಾಗಿ.
2] ಮಂಡಳಿಯ ಎಲ್ಲಾ ಶಾಖೆಯ ಮುಖ್ಯಸ್ಥರ ಮಾಹಿತಿಗಾಗಿ
3] ಮಾನ್ಯ ಕಾರ್ಯದರ್ಶಿಯವರ ಆಪ್ತ ಶಾಖೆಗೆ ಮಾಹಿತಿಗಾಗಿ.

D/Technical leeter (Y)/ General ltr